## ವಿತ್ತೀಯ ಕಾರ್ಯಕಲಾಪ

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "1995-96ನೇ ಸಾಲಿಗೆ ಸಂಬಂಧಿಸಿದ ಪೂರಕ ಅಂದಾಜುಗಳು (ಅಂತಿಮ ಕಂತು) ಬಗ್ಗೆ ಪ್ರಸ್ತಾವನೆಯನ್ನು ಮಾನ್ಯ ಹಣಕಾಸಿನ ಸಚಿವರ ಪರವಾಗಿ ತಮ್ಮ ಅನುಮತಿ ಪಡೆದು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

### ಪ್ರಸ್ತಾವ ಮಂಡಿಸಲಾಯಿತು

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"1995-96ನೇ ಸಾಲಿಗೆ ಸಂಬಂಧಿಸಿದ ಪೂರಕ ಅಂದಾಜುಗಳು (ಅಂತಿಮ ಕಂತು)" ಅಂಗೀಕರಿಸುವುದು.

### ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

## ಶಾಸನ ರಚನಾ ಕಾರ್ಯಕಲಾಪಗಳು

### (1) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 1996 ಪರ್ಯಾಲೋಚನಾ ಪ್ರಸ್ತಾಪ

+ ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ,

1996ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವನ್ನು ಮಂಡಿಸಲಾಯಿತು.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಈ ವಿಧೇಯಕವನ್ನು ಅಧ್ಯಾದೇಶದ ಬದಲು ಮಂಡಿಸುತ್ತಿದ್ದೇನೆ. ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನ 156 ಮತ್ತು 157ನೇ ಪ್ರಕರಣದಲ್ಲಿ ಈ ಅಧ್ಯಕ್ಷರ ಕೈಕೆಳಗೆ ಕೆಲಸಮಾಡುವಂಥ ಕಾರ್ಯನಿರ್ವಾಹಕರಾಗಲಿ ಅಥವಾ ಜೇರ ಅಧಿಕಾರಿಗಳು ಅವರ ನಿಯಂತ್ರಣ ಹಾಗೂ ಮೇಲ್ವಿಚಾರಣೆಗೆ ಒಳಪಟ್ಟು ಕೆಲಸ ಮಾಡುವುದು ಇಂದು, ಅದೇರೀತಿ ಕಾರ್ಯನಿರ್ವಾಹಕ ಮುಖ್ಯಸ್ಥರ ಸ್ಥಾನವನ್ನು ಈಗಾಗಲೇ ನಾವು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಕೊಡುವುದಕ್ಕಾಗಿ ಇದೇ ಸಭೆಯ ಅಭಿಮತವಾಗಿದ್ದುದರಿಂದ ಕಾಲಂ ನಂ. 152 ಮತ್ತು 139ನೇ ಪ್ರಕರಣಗಳನ್ನು ತಿದ್ದುಪಡಿ ಮಾಡುವುದರ ಮೂಲಕ, ತಾಲ್ಲೂಕು ಮತ್ತು ಜಿಲ್ಲಾಪಂಚಾಯತಿ ಅಧ್ಯಕ್ಷರಿಗೆ ಕಾರ್ಯನಿರ್ವಾಹಕ ಹುದ್ದೆಯನ್ನು ಕೊಟ್ಟಿದ್ದೇವೆ. ಅದೇ ರೀತಿ ಕಾಲಂ ನಂ. 159ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ ಆಯಾಯ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಯ ವ್ಯಾಪ್ತಿಯಲ್ಲಿ ಬರತಕ್ಕ ಲೋಕಸಭಾ ಸದಸ್ಯರು ಮತ್ತು ರಾಜ್ಯ ವಿಧಾನ ಸಭಾ

ಸದಸ್ಯರು ಪುರಸಭೆ ಮುನಾಫಾ ಕ್ಷೇತ್ರಗಳು ಒಂದಕ್ಕಿಂತ ಹೆಚ್ಚು ಇದ್ದರೆ, ಬಹುಭಾಗ ನಿರತಕ್ಕ ಕ್ಷೇತ್ರದಲ್ಲಿರುವವರು ಸದಸ್ಯರಾಗಿರುತ್ತಾರೆ, ರಾಜ್ಯಸಭಾ ಸದಸ್ಯರಾಗಿರುವವರು ತಮ್ಮ ಖಾಯಂ ನಿವಾಸವನ್ನು ಯಾವ ಕ್ಷೇತ್ರದಲ್ಲಿ ಕೂಟ್ಟಿರುತ್ತಾರೆ, ಆ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಂಡಂತೆ ಅವರು ಸದಸ್ಯರಾಗಿರಬೇಕು ಎನ್ನುವಂಥ 3 ತಿದ್ದುಪಡಿಗಳನ್ನು ತಂದಿದ್ದಾರೆ. ಹಿಂದೆ ಈ ವಿಚಾರದಲ್ಲಿ ಈ ಬಗ್ಗೆ ಮಾನ್ಯ ಸದಸ್ಯರ ಸಮ್ಮತಿಯಿತ್ತ ಅಭಿಪ್ರಾಯ ಇದ್ದುದರಿಂದ ಒಂದು ಅಧ್ಯಾದೇಶವನ್ನು ತರ್ತಾಗಿ ಆ ಸಂದರ್ಭದಲ್ಲಿ ಹೊರಡಿಸಿದ್ದೆವು. ಇಪತ್ತು ಆ ತುರ್ತು ಅಧ್ಯಾದೇಶ ಬದಲಿಗೆ ಈ ಒಂದು ತಿದ್ದುಪಡಿಯನ್ನು ಇಲ್ಲಿ ತಂದಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆಯನ್ನು ದಯಪಿಟ್ಟು ಕೊಡುವೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

+ಶ್ರೀ ವೈ. ರಾಮಕೃಷ್ಣ (ಅನೇಕಲ್) : ಸಭಾಸ್ಪೀಕರ್, ಇವರು ತಂದಿರತಕ್ಕ ತಿದ್ದುಪಡಿ ಮಸೂದೆ ಪೂರ್ಣವಾಗಿಲ್ಲ, ಅಪೂರ್ಣವಾಗಿದೆ. ಈ ಮಸೂದೆ ನಮ್ಮ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರುಗಳಿಗೆ ಅಧಿಕಾರ ಮಟಿಸಿಕೊಡತಕ್ಕದ್ದು. ಆದರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ತಾವು ಏಕೆ ಬಟ್ಟು ಬಿಟ್ಟರಿ ಎಂದು ಅರ್ಥವಾಗುತ್ತಿಲ್ಲ. ನಾನು ಅಕ್ಕ ನೋಡಿದೆ. ಕರ್ನಾಟಕ ರಾಜ್ಯದಲ್ಲಿ ನಿರತಕ್ಕದ್ದು ಕೇವಲ 20 ಜಿಲ್ಲಾ ಪಂಚಾಯಿತಿಗಳು, 175 ತಾಲ್ಲೂಕು ಪಂಚಾಯಿತಿಗಳು ಮತ್ತು 5670 ಗ್ರಾಮ ಪಂಚಾಯಿತಿಗಳು ನಮ್ಮ ರಾಜ್ಯದಲ್ಲಿವೆ. 5670 ಗ್ರಾಮ ಪಂಚಾಯಿತಿಗಳ ಅಧ್ಯಕ್ಷರುಗಳಿಗೆ ತಾವು ಅಧಿಕಾರ ಕೊಟ್ಟರೆ, ನಿಜವಾಗಿ ಗ್ರಾಮರಾಜ್ಯ ರಚನೆ ಆದಂತಾಗುತ್ತದೆ. ಅದನ್ನು ಬಿಟ್ಟು ನೀವು ಕೇವಲ 20 ಜಿಲ್ಲೆ ಅಂದರೆ ಬಹುತೇ ಆದು ಒಂದು ಸರ್ಕಾರ ಇದ್ದ ಹಾಗೆ. ಅಲ್ಲಿಯೂ ಐಎಎಸ್ ಅಧಿಕಾರಿಗಳು ದರ್ಬಾರು ಮಾಡುವುದು. ಆದು ಬಿಟ್ಟರೆ 175 ತಾಲ್ಲೂಕು ಜೋರ್ಡುಗಳು. ಅದಕ್ಕೆ ಅಧಿಕಾರ ದರ್ಬಾರು ಮಾಡುವುದು. ಆದು ಬಿಟ್ಟರೆ 175 ತಾಲ್ಲೂಕು ಜೋರ್ಡುಗಳು. ಅದಕ್ಕೆ ಅಧಿಕಾರ ನೀವು ಹೇಳಿದ್ದೆ ಅದರೂ ಅಡ್ಡಿಯಿಲ್ಲ. ಅಂದಮೇಲೆ ಮುಖ್ಯವಾದ ಅಂಶಕ್ಕೆ ಯಾವುದಕ್ಕೆ ತಿದ್ದುಪಡಿ ತರಬೇಕು ಅದಕ್ಕೆ ತಿದ್ದುಪಡಿ ತಂದಿಲ್ಲ; ಮತ್ತು ಅದಕ್ಕೆ ಕಾರಣ ಕೂಡ ಸೂಚಿಸಿಲ್ಲ. ಈ ಒಂದು 5670 ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿಸಲ್ಪಟ್ಟ ಅಧ್ಯಕ್ಷರುಗಳು ಯಾವ ಪಕ್ಷಬೇಧ ಇಲ್ಲದೆ ಚುನಾಯಿಸಲ್ಪಟ್ಟಿದ್ದಾರೆ. ಅದಕ್ಕೆ ಪಕ್ಷವೆ ಪತಿಯಿಂದ ಮಾಕಿಲ್ಲ. ಅವರು ತಮ್ಮ ಸ್ವಶಕ್ತಿಯಿಂದ ಗೆದ್ದು ಬಂದಿದ್ದಾರೆ. ಅದಕ್ಕೋಸ್ಕರ ನೀವು ಅಷ್ಟೊಂದು ಆಸಕ್ತಿ ತೋರಿಸಿಲ್ಲ. ಇದಕ್ಕೆ ಏತಕ್ಕೆ ನೀವು ಆಸಕ್ತಿ ತೋರಿಸಿದ್ದೀರಂದರೆ ಪಕ್ಷಗಳಿಂದ ಅಧ್ಯಕ್ಷರು ಆಯ್ಕೆಯಾಗಿದ್ದಾರೆ ಎಂದು. ಅವರಲ್ಲೂ ನಿಮ್ಮ ಪಕ್ಷದಿಂದ ಹಚ್ಚಿಗೆ ಆಯ್ಕೆಯಾಗಿದ್ದಾರೆ, ಅವ್ಯವಹಾರದಿಂದ ನೀವು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಅಧಿಕಾರ ಕೊಡುವುದಕ್ಕೆ ನೀವು ಬಹಳ ಮುಂದುವರಿದ್ದೀರಿ. ಮುಂದುವರಿಯಿರಿ ನಾನು ಅದಕ್ಕೆ ಬೇಡ ಅನ್ನುವುದಿಲ್ಲ. ಆದರೆ ಇದೇ ಉತ್ಸಾಹವನ್ನು ಅಲ್ಲಿ ಏತಕ್ಕೆ ತೋರಿಸಿಲ್ಲ? ಇವರು ಹೇಳುತ್ತಾರೆ, ಜಿಲ್ಲಾ ಪಂಚಾಯಿತಿಯಲ್ಲಿ ಅಲ್ಲಿ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್‌ಗೆ ಏನು ಅಧಿಕಾರ ಇತ್ತು...

## ANNOUNCEMENT

MR. DEPUTY SPEAKER : I welcome the Indo-German Cultural